MVC No.5/2020 PW-1

<u>ದಿನಾಂಕ **26.09.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ಶ್ರೀ ಎಸ್ ವೈ ಎಸ್ ವಕೀಲರಿಂದ ಃ</u>

ನಾನು ಈಗ ಏನೂ ಕೆಲಸ ಮಾಡುತ್ತಿಲ್ಲ. ನಾನು ಭದ್ರತಾ ಕೆಲಸವನ್ನು ಬೆಂಗಳೂರಿನ ಕೆ ಪಿ ಎಲೆಕ್ಟ್ರಾನಿಕ್ ಸೆಂಟರ್ ನಲ್ಲಿ ಮಾಡುತ್ತಿದ್ದೆ. ನನಗೆ 12 ಸಾವಿರ ಸಂಬಳ ಬರುತ್ತಿತ್ತು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ನನಗೆ ಈಗ 55 ವರ್ಷ. ನನ್ನ ಆಧಾರ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮನೆಯಿಂದ ಆಸ್ಪತ್ರೆಗೆ ಬೈಕಿನಲ್ಲಿ ನನ್ನ ಹೆಂಡತಿಯನ್ನು ಕರೆದುಕೊಂಡು ಹೋಗುತ್ತಿದ್ದೆ. ನನ್ನ ಬಳಿ ಡಿ ಎಲ್ ಇದ್ದು, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಮುಂದುಗಡೆಯಿಂದ ಅಪಘಾತವಾಗಿರುತ್ತದೆ. ಸಡನ್ ಆಗಿ ತಿರುವು ಪಡೆಯುವಾಗ ಅಪಘಾತವಾಗಿರುತ್ತದೆ. ನನ್ನ ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಡಿಕ್ಕಿ ಪಡಿಸಿರುತ್ತೇನೆಂದರೆ ಸುಳ್ಳು. ದೂರನ್ನು ನನ್ನ ತಮ್ಮ ನೀಡಿರುತ್ತಾರೆ. ಪ್ರತ್ಯಕ್ಷದರ್ಶಿಯವರನ್ನು ಸಾಕ್ಷ್ಯಾ ಮಾಡಿಸಲು ತೊಂದರೆ ಇಲ್ಲ. ಚಿಕಿತ್ಸೆ ನೀಡಿದ ವೈಧ್ಯಾಧಿಕಾರಿಯವರನ್ನು ಸಾಕ್ಷ್ಯಾ ಮಾಡಿಸಲು ತೊಂದರೆ ಇಲ್ಲ. ನಾನು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನನಗೆ ಯಾವುದೇ ಆರ್ಥಿಕ ಮತ್ತು ದೈಹಿಕ ನಷ್ಟ ಉಂಟಾಗಿಲ್ಲವೆಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

<u>ಮರುವಿಚಾರಣೆ ಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ವೆಂಕಟೇಶಪ್ಪ. ವಿ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.